ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	350(40)
ಸದಸ್ಯರ ಹೆಸರು	ಶ್ರೀ. ಎಸ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	15.09.2021.
ಉತ್ತರಿಸಬೇಕಾದ ಸಚಿವರು	ಮಾನ್ಯ ಕಂದಾಯ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ	ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿಯ ಹುಳಿಮಾವು ಗ್ರಾಮದ ಸರ್ವೆ ನಂಬರ್:63ರಲ್ಲಿ 5 ಎಕರೆ ಸ್ಥಳವನ್ನು ಇಸ್ಲಾಮಿಯಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜು ಸಂಸ್ಥೆಯವರು ಒತ್ತುವರಿ ಮಾಡಿರುವುದಾಗಿ 2009ರಲ್ಲೇ ಸರ್ಕಾರದ ಗಮನಕ್ಕೆ ಬಂದಿದ್ದರೂ, ದಿನಾಂಕ:14.09.2020ರವರೆಗೆ ಯಾವುದೇ ಕ್ರಮ ಕೈಗೊಳ್ಳದೆ ಅಕ್ರಮಿತ ಒತ್ತುವರಿ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡಲು ಸಹಕರಿಸಿದ ಆ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳನ್ನು ಅಮಾನತ್ತು ಮಾಡದಿರಲು ಕಾರಣವೇನು; ಯಾವ ಕಾಲಮಿತಿಯೊಳಗೆ ಅಮಾನತ್ತುಗೊಳಿಸಲಾಗುವುದು;	ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿಯ ಹುಳಿಮಾವು ಗ್ರಾಮದ ಸರ್ವೆ ನಂಬರ್ 63ರಲ್ಲಿ 5-00 ಎಕರೆ ಪೈಕಿ ಇಸ್ಲಾಮಿಯಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜು ಶಿಕ್ಷಣ ಸಂಸ್ಥೆಯವರು ಒತ್ತುವರಿ ಮಾಡಿರುವುದಾಗಿ ಮಾನ್ಯ ಶ್ರೀ ಎ.ಟಿ. ರಾಮಸ್ವಾಮಿ ಆಯೋಗದ ವರದಿಯಂತೆ 01/09/2006 ರಂದು ತಯಾರಿಸಿರುವ ನಕ್ಷೆಯಂತೆ ಸದರಿ ಒತ್ತುವರಿಯು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಸಂಬಂಧ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರವು ಹಲವಾರು ವರ್ಷಗಳಿಂದ ಪ್ರಯತ್ನಿಸಲಾಗಿದ್ದರೂ, ಒತ್ತುವರಿ ಸಂಸ್ಥೆಯು ಘನ ಉಚ್ಚನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲು ಮಾಡಿ ತಡೆಯಾಜ್ಞೆಯನ್ನು ಪಡೆಯಲಾಗಿತ್ತು. ಸದರಿ ತಡೆಯಾಜ್ಞೆಯನ್ನು ಸರ್ಕಾರದಿಂದ ತೆರವುಗೊಳಿಸಿ ಅಂತಿಮವಾಗಿ ಸರ್ಕಾರದ ಆದೇಶಗಳಂತೆ ಒತ್ತುವರಿಯನ್ನು ಖುಲ್ಲಾ ಪಡಿಸಿ ಸರ್ಕಾರದ ಸುಪರ್ದಿಗೆ ಪಡೆಯಲಾಗಿರುತ್ತದೆ. ಈ ಅವಧಿಯಲ್ಲಿ ಸೇವೆ ಸಲ್ಲಿಸಿದ ಅಧಿಕಾರಿ/ನೌಕರರನ್ನು ಅಮಾನತ್ತು ಮಾಡಿರುವುದು ಕಂಡುಬಂದಿರುವುದಿಲ್ಲ.
ಆ	ಜಾಗವನ್ನು ಒತ್ತುವರಿ ಮಾಡಿದ ಹಂತದಲ್ಲೇ ಸಂಬಂಧಿತ ಅಧಿಕಾರಿಗಳು ಲಂಚ ಪಡೆದು, ಸದರಿ ಒತ್ತುವರಿ ಜಾಗದ ಕುರಿತು ಸರ್ಕಾರಕ್ಕೆ ಸಮರ್ಪಕ ಮಾಹಿತಿ ನೀಡದಿರುವ ಅಧಿಕಾರಿಗಳನ್ನು ಸೇವೆಯಿಂದ ವಜಾಗೊಳಿಸಿ, ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ಒತ್ತುವರಿಯೆಂದು ಗುರ್ತಿಸಲ್ಪಟ್ಟ ಕಾಲಾನಂತರದಲ್ಲಿ ಒತ್ತುವರಿ ಸಂಸ್ಥೆಯಾದ ಇಸ್ಲಾಮಿಯಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ರವರು ವಿವಿಧ ನ್ಯಾಯಾಲಯಗಳ ಮೊರೆ ಹೋಗಿದ್ದು, ರಾಜ್ಯ ಸರ್ಕಾರದ ವಿರುದ್ಧ ಪ್ರಕರಣ ದಾಖಲಿಸಿ ತಡೆಯಾಜ್ಞೆ/ ಯಥಾಸ್ಥಿತಿ ಇತ್ಯಾದಿ ಆದೇಶಗಳನ್ನು ಪಡೆದು, ಒತ್ತುವರಿ ತೆರವುಗೊಳಿಸಲು ಮಾಡಿರುವ ಪ್ರಯತ್ನಗಳನ್ನು ತಡೆಹಿಡಿಯಲು ಪ್ರಯತ್ನಿಸಿರುವುದು ಕಂಡುಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ನ್ಯಾಯಾಲಯಗಳಲ್ಲಿ ಪ್ರಕರಣಗಳಿದ್ದಾಗ ತಾಲ್ಲೂಕು ಆಡಳಿತ ಯಂತ್ರದ ವತಿಯಿಂದ ಕಾಲಕಾಲಕ್ಕೆ ಅಗತ್ಯ ಕ್ರಮಗಳನ್ನು ವಿವಿಧ ಕಾಲಾವಧಿಯಲ್ಲಿ ಅಧಿಕಾರಿಗಳು/ಸಿಬ್ಬಂದಿಯವರು ಕ್ರಮ ಕೈಗೊಂಡಿರುತ್ತಾರೆ. ಈ ಸಂಬಂಧ ಅಧಿಕಾರಿ/ಸಿಬ್ಬಂದಿಗಳನ್ನು ಸೇವೆಯಿಂದ ವಜಾಗೊಳಿಸಿ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿರುವುದು ಕಂಡುಬಂದಿರುವುದಿಲ್ಲ.
ಇ	ಅನಧಿಕೃತ ಒತ್ತುವರಿ ಸ್ಥಳದಲ್ಲಿ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡದ ವಿಸ್ತೀರ್ಣವೆಷ್ಟು; ಸದರಿ ವಿಸ್ತೀರ್ಣದ ಕಟ್ಟಡ ನಿರ್ಮಿಸಲು ತಗಲುವ ಸಮಯವೆಷ್ಟು; ಅಕ್ರಮವಾಗಿ ನಿರ್ಮಿಸಿರುವ ಅಪಾಯಕಾರಿ ಕಟ್ಟಡವನ್ನು ತೆರವುಗೊಳಿಸುವ ಬಗ್ಗೆ ಸರ್ಕಾರದ ನಿಲುವೇನು?	ಅನಧಿಕೃತ ಒತ್ತುವರಿ ಸ್ಥಳದಲ್ಲಿ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡದ ವಿಸ್ತೀರ್ಣ ಅಂದಾಜು 7200 ಚದರ ಅಡಿಗಳು ಇರುತ್ತದೆ ಸದರಿ ವಿಸ್ತೀರ್ಣದ ಕಟ್ಟಡ ನಿರ್ಮಿಸಲು ಸರಿಸುಮಾರು 2 ವರ್ಷಗಳ ಸಮಯವಾಗಿರಬಹುದು. ಸದರಿ ಕಟ್ಟಡವನ್ನು ಈಗಾಗಲೇ ಸರ್ಕಾರದ ಕಬ್ಜೆಗೆ ಪಡೆದುಕೊಂಡಿದ್ದು, ಪೂರ್ಣ ಸ್ವಾಧೀನ ಸರ್ಕಾರದ ಸುಪರ್ದಿನಲ್ಲಿ ಇರುತ್ತದೆ.

ಇ-ಕಂಇ 266 ಬಿಎಂಎಂ 2021

(ಆರ್.ಅಶೋಕ)
ಕಂದಾಯ ಸಚಿವರು